ಇ.ಸಿ.ಎ. 3/2025
ಪಿ.ಡಬ್ಲ್ಯೂ : 01

ದಿನಾಂಕ 15-11-2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ವಕೀಲರಿಂದಃ**

| | |
|---|---|
| ನಿಪಿ-19 | MERCY CRANE SERVICE ರವರು ಕೊಟ್ಟ ಸರ್ಟಿಫಿಕೇಟ್ (ರುಜುವಾತುಪಡಿಸುವ ಇರಾದೆ ಮೇರೆಗೆ ಗುರುತಿಸಲಾಯಿತು ) |
| ನಿಪಿ-20 | MERCY CRANE SERVICE ರವರು ಕೊಟ್ಟ Salary Slip (ರುಜುವಾತುಪಡಿಸುವ ಇರಾದೆ ಮೇರೆಗೆ ಗುರುತಿಸಲಾಯಿತು ) |

ಆದ್ದರಿಂದ ಅರ್ಜಿಯನ್ನು ಪುರಸ್ಕರಿಸಬೇಕಾಗಿ ಕೋರಿಕೆ.

**ಅರ್ಜಿದಾರರಿಗೆ ಹಿಂದೆ ಭಾಷೆ ಮಾತ್ರ ಗೊತ್ತಿರುವುದು ಎಂದು ತಿಳಿಸಿದ ಮೇರೆಗೆ ವಕೀಲರಾದ ರಾಯನ್ ಫರ್ನಾಂಡಿಸ್ ರವರನ್ನು ತರ್ಜುಮೆದಾರನ್ನಾಗಿ ನೇಮಿಸಲಾಯಿತು**

**ಪಾಟೀ ಸವಾಲು ಃ ಎದುರುದಾರರ ಪರ ಡಿಬಿಎಸ್ ವಕೀಲರಿಂದ ಃ**

ಅರುಣ್ ಕುಮಾರ್ ನನ್ನ ಗಂಡ. ನನ್ನ ಗಂಡ ಕ್ರೈನ್ ಆಪರೇಟರ ಆಗಿದ್ದರು . ನನ್ನ ಗಂಡನಿಗೆ ಕ್ರೈನ್ ಆಪರೇಟರ್ ಆಗಿ ಕೆಲಸ ಮಾಡಲು ಲೈಸೆನ್ಸ್ ಇತ್ತು. ಅದನ್ನು ಹಾಜರುಪಡಿಸಬಹುದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ನಮ್ಮ ವಕೀಲರಿಗೆ ಕೊಟ್ಟಿರುತ್ತೇನೆ ಎಂದು ತಿಳಿಸಿರುತಾರೆ . ನನ್ನ ಗಂಡ ಬಿಎ ಪದವಿದರರು . ನನ್ನ ಗಂಡನ ಜನನ ಪ್ರಮಾಣ ಪತ್ರ ಮತ್ತು ಎಸ್ ಎಸ್ ಎಲ್ ಸಿ ಮಾರ್ಕ್ಸ್ ಕಾರ್ಡ್ ಗಳನ್ನು ಹಾಜರುಪಡಿಸಲು ತೊಂದರೆಇದೆಯಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಎಸ್ ಎಸ್ ಎಲ್ ಸಿ ಮಾರ್ಕ್ಸ್ ಕಾರ್ಡ್ ಉತ್ತರಪ್ರದೇಶ ರಾಜ್ಯದ ನಮ್ಮ ಊರಿನಲ್ಲಿದೆ ಅದನ್ನು ಬೇಕಾದಲ್ಲಿ ಹಾಜರುಪಡಿಸಿರುತ್ತೇನೆ . ಎಸ್ ಎಸ್ ಎಲ್ ಸಿ ಮಾರ್ಕ್ಸ್ ಕಾರ್ಡ್ ನ್ನು ಹಾಜರುಪಡಿಸಿದರೇ ನನ್ನ ಗಂಡನ ವಯಸ್ಸು ಗೊತ್ತಾಗುತ್ತದೆ ಎಂದು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಳ್ಳುವ ಸಮಯದಲ್ಲಿ 47 ವರ್ಷ ವಯಸ್ಸು ಆಗಿತ್ತು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು 39 ವರ್ಷ ವಯಸ್ಸು ಆಗಿತ್ತು ಎಂದುತಿಳಿಸಿರುತತಾರೆ. ನನ್ನ ಗಂಡನಿಗೆ 39 ವರ್ಷ ವಯಸ್ಸು ಅಗಿತ್ತು ಎನ್ನುವ ಬಗ್ಗೆ ನಿಖರವಾದ ದಾಖಲೆ ಇಲ್ಲ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ನಮ್ಮ ಬಳಿ ಆಧಾರ

ಕಾರ್ಡ್ ಇದೆ. ಅಪಘಾತದ ಸಮಯದಲ್ಲಿ ನನ್ನ ಗಂಡ ಕ್ರೈನ್ ಚಾಲಕನಾಗಿದ್ದರು . ನನ್ನ ಗಂಡ ಕ್ರೈನ್ ಚಾಲಕನಾಗಿರಲಿಲ್ಲ ಮತ್ತು ಅವರಿಗೆ ಕ್ರೈನ್ ಚಲಾಯಿಸಲು ಬರುತಿರಲಿಲ್ಲ ಎಂದರೆ ಸರಿಯಲ್ಲ. ನಾವು ಉಡುಪಿ ಕೃಷ್ಣ ಪೆಟ್ರೋಲ್ ಬಂಕ್ ಬಳಿ 7 ವರ್ಷಗಳಿಂದ ವಾಸವಾಗಿದ್ದೆವು. ನಾವು ವಾಸವಾಗಿದ್ದ ಬಗ್ಗೆ ದಾಖಲೆಯನ್ನು ನಮ್ಮ ವಕೀಲರಿಗೆ ಕೊಟ್ಟಿರುತ್ತೇವೆ. ನನ್ನ ಗಂಡ ಮೃತಪಡುವ ಒಂದು ವರ್ಷ ಮೊದಲಿನಿಂದ ಕ್ರೈನ್ ಕಂಪೆನಿಯಲ್ಲಿ ಚಾಲಕರಾಗಿದ್ದರು . ನನ್ನ ಗಂಡ ಪ್ರತಿದಿನ ಕೆಲಸಕ್ಕೆ ಹೋಗುತಿದ್ದರು ಯಾವಾಗ ಕರೆಯುತಿದ್ದರು ಆಗ ಎಲ್ಲಾ ಹೋಗಿ ಕ್ರೈನ್ ಚಾಲಕರಾಗಿ ಕೆಲಸ ಮಾಡುತಿದ್ದರು . ನನ್ನ ಗಂಡ ಇತರೇ ಬೇರೆ ಕಂಪೆನಿಯಲ್ಲಿ ಕ್ರೈನ್ ಚಾಲಕರಾಗಿ ಕೆಲಸ ಮಾಡಿಲ್ಲ ಇದೇ ಒಂದೇ ಕಂಪೆನಿಯಲ್ಲಿ ಕ್ರೈನ್ ಚಾಲಕರಾಗಿ ಕೆಲಸ ಮಾಡುತಿದ್ದರು . ನನ್ನ ಗಂಡ ಕ್ರೈನ್ ಚಾಲಕರಾಗಿ ಆಪರೇಟ್ ಮಾಡುತಿದ್ದನ್ನು ನಾನು ಕಣ್ಣಿನಿಂದ ಹೋಗಿ ನೋಡಿಲ್ಲ . ನನ್ನ ಗಂಡ ಮೃತಪಡುವ ಸಮಯದಲ್ಲಿ ನಾನು ಉಡುಪಿ ಯ ಕೃಷ್ಣ ಪೆಟ್ರೋಲ್ ಬಂಕ್ ಬಳಿ ಇರುವ ಮನೆಯಲ್ಲಿ ನಾನು ಇದ್ದೆ . ಉಡುಪಿ ಯ ಕೃಷ್ಣ ಪೆಟ್ರೋಲ್ ಬಂಕ್ ಬಳಿ ವಾಸವಾಗಿದ್ದ ಬಗ್ಗೆ ರೇಶನ್ ಕಾರ್ಡ್ ಇರುವುದಿಲ್ಲ. ಕಂಪೆನಿಯಲ್ಲಿ ಕೆಲಸ ಮಾಡುತಿದ್ದ ಬಗ್ಗೆ ಹಾಜರಾತಿ ಪುಸ್ತಕ ಹಾಜರುಪಡಿಸಬಹುದಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿ ಅವೆಲ್ಲಾ ನಮ್ಮವಕೀಲರಿಗೆ ಕೊಟ್ಟಿರುವುದಾಗಿ ತಿಳಿಸಿರುತ್ತಾರೆ . ನನ್ನ ಗಂಡನಿಗೆ ಸಂಭಳವನ್ನು ಬ್ಯಾಂಕ್ ಖಾತೆಗೆ ಹಾಕುತಿದ್ದರು . ನನ್ನ ಗಂಡನ ಬ್ಯಾಂಕ್ ಸ್ಟೇಟ್‌ಮೆಂಟ್ ಹಾಜರುಪಡಿಸಿದರೇ ನನ್ನ ಗಂಡನಿಗೆ ಎಷ್ಟು ಸಂಭಳ ಬರುತಿತ್ತು ಎಂದು ಗೊತ್ತಾಗುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರಿದು ಅದನ್ನು ಹಾಜರುಪಡಿಸುತ್ತೇನೆ . ನಾನು ಹೇಳುವ ರೀತಿ ನನ್ನ ಗಂಡನಿಗೆ ಸಂಭಳ ಬರುತ್ತಿರಲಿಲ್ಲವಾದ್ದರಿಂದ ನಾನು ಪಾಸ್ ಪುಸ್ತಕವನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. Salary Certificate ನ್ನು ನಾವು ಕೋರಿಕೊಂಡಿದ್ದರಿಂದ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಿಪಿ 19 ಮತ್ತು 20 ನ್ನು ಈ ಕೇಸಿಗಾಗಿ ಸೃಷ್ಟಿ ಮಾಡಿರುತೀರಿ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಮತ್ತು 1ನೇ ಎದುರುದಾರರ ನಡುವೆ ಕಾರ್ಮಿಕ ಮತ್ತು ಮಾಲೀಕ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ 1ನೇ ಎದುರುದಾರನ ಕೆಲಸ ಮಾಡುವಾಗ ಮೃತಪಟ್ಟಿಲ್ಲ ಎಂದರೆ ಸರಿಯಲ್ಲ. ಆದ್ದರಿಂದ ಎದುರುದಾರರು ಪರಿಹಾರ ಕೊಡಲು

ಇ.ಸಿ.ಎ. 3/2025
ಪಿ.ಡಬ್ಲ್ಯು : 01

ಬಾದ್ಯಸ್ಥರಲ್ಲ ಎಂದರೆ ಸರಿಯಲ್ಲ.

**ಮರುವಿಚಾರಣೆ ಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದರು

ಪ್ರ.ಹಿ.ಸಿ.ನ್ಯಾ. ಉಡುಪಿ.